# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ : 122, ಕೆ.ಪಿ.ಅಗ್ರಹಾರ ಬೆಂಗಳೂರು.

ಸಂ:ಸ.ಅ/ವಾರ್ಡ್ ಸಮಿತಿ/ /ಸಭೆ- /20-21 ದಿ:6.02.2021

## ಕೆ.ಪಿ.ಅಗ್ರಹಾರ ವಾರ್ಡ್ ಸಂಖ್ಯೆ : 122 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020-21 ದಿ: 21.09.2020 ರವರ ಆದೇಶದಂತೆ ದಿ: 06.02.2021 ರಂದು ವಾರ್ಡ್ ಸಂಖ್ಯೆ : 122 ರ ಕೆ.ಪಿ.ಅಗ್ರಹಾರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

### ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ಬಿ ರವಿವರ್ಮ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀಮತಿ. ಸಂಗೀತ ಆರ್ | ಕಾರ್ಯದರ್ಶಿ. |
| 3. | ಶ್ರೀ. ಮುನಿಯಣ್ಣ (ಹಿ.ಆ.ಪ) | ಸದಸ್ಯರು. |
| 4. | ಶ್ರೀಮತಿ. ಮಧು (BWSSB AE) | ಸದಸ್ಯರು. |
| 5. | ಶ್ರೀ. ಹರೀಶ್ (Supervisor) | ಸದಸ್ಯರು. |
| 6. | ಶ್ರೀ. ಪ್ರಾಶಂತ್. | ಸದಸ್ಯರು. |

ದಿನಾಂಕ: 06/02/2021 ರಂದು ಸಮಯ 11.00 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅದ್ಯಕ್ಷರಾದ ಶ್ರೀ.ಬಿ.ರವಿವರ್ಮ ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಬಿ.ರವಿವರ್ಮ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ.ಸಂಗೀತ ಆರ್ ರವರು ಅಧ್ಯಕ್ಷರನ್ನ ಹಾಗೂ ಹಾಜರಿದ್ದ .ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. Mask ಧರಿಸದ ಸಾರ್ವಜನಿಕರಿಗೆ ಹಾಗೂ ತ್ಯಾಜ್ಯ ಬಿಸಾಡುವ ಸಾರ್ವಜನಿಕರಿಗೆ ದಂಢ ವಿಧಿಸಿರುವ ಅಂಕಿ ಅಂಶಗಳ ವಿವರವನ್ನು ಸಭೆಯಲ್ಲಿ ಹಾಜರಿದ್ದ Marshal ರವರು ಕಾರ್ಯದರ್ಶಿ ರವರಿಗೆ ನೀಡಿದರು.
2. ಘನ ತ್ಯಾಜ್ಯದ ಬಗ್ಗೆ ಮೆಟ್ರೋ ನಿಲ್ದಾಣದ ಬಳಿ ದೂರು ದಾಖಲೇಗೊಂಡಿದ್ದು, ಸ್ವಚ್ಛಗೊಳಿಸಿರುವುದಾಗಿ ಕಾರ್ಯದರ್ಶಿ ನೋಡಲ್ ಅಧಿಕಾರಿಗೆ ತಿಳಿಸಿದರು.
3. ವಾರ್ಡ್ ಸಂಖ್ಯೆ: 122 ವ್ಯಾಪ್ತಿಯಲ್ಲಿ ಖಾಸಗಿ ಆಸ್ಪತ್ರೆ, ಕ್ಲಿನಿಕ್ ಮತ್ತು ಆರೋಗ್ಯ ಕಾರ್ಯಕ್ರಮದ ಡಾಕ್ಟರ್ ಸಹಾಯದೊಂದಿಗೆ ಕೋವಿಡ್-19 ರ ಲಸಿಕೆಯನ್ನು ನೀಡಲಾಗಿದೆ. ಮೊದಲನೆ ಹಂತದಲ್ಲಿ 38 ಲಸಿಕೆ ನೀಡಲಾಗಿದೆ ಹಾಗೂ 2021 ರಲ್ಲಿ ಪಲ್ಸ್ ಪೋಲಿಯೋ ಲಸಿಕೆಯನ್ನು 0-5 ವರ್ಷದ ಮಕ್ಕಳಿಗೆ ಶೇ: 95% ನೀಡಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
4. ಆರೋಗ್ಯ ಇಲಾಖಾವತಿಯಿಂದ ವಾರ್ಡ್‌ನ ಯಾವುದಾದರೂ ರಸ್ತೆಯಲ್ಲಿ +ve Case ಪತ್ತೆಹಚ್ಚುವ ಕಾರ್ಯಕ್ರಮದಲ್ಲಿ ಕ್ಯಾಂಪ್ ಮಾಡಲಾಗಿತ್ತು ದಿನಕ್ಕೆ: 100 ರಿಂದ 120 ಜನರಿಗೆ ಪರೀಕ್ಷೆ ಮಾಡಲಾಗಿ, +ve Case ದಾಖಲಾಗುತ್ತಿಲ್ಲವೆಂದು ವಿವರಿಸಿದರು.
5. BWSSB ರವರು ಕಾಮಗಾರಿ ನಿರ್ವಹಿಸಿದ ನಂತರ ರಸ್ತೆ ಅಗೆದಿರು ಹಳ್ಳವನ್ನು ಮುಚ್ಚಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಿದರು.

6. ಮುಂದಿನ ಸಭೆಯಲ್ಲಿ Marshal & Supervisor ರವರು ಹಾಜರಾಗುವಂತೆ ಸೂಚಿಸಲು ನೋಡಲ್ ಅಧಿಕಾರಿಗಳು ಕಾರ್ಯದರ್ಶಿ ರವರಿಗೆ ತಿಳಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

RSangale
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 122.

B. R
ಅಧ್ಯಕ್ಷರು 06/02/2021
ಹಾಗೂ ನೋಡಲ್ ಅಧಿಕಾರಿಗಳು.